work. I will also get it re-examined whether it is possible to cut off some water for this paddy. ಇವೊತ್ತಿನ ದಿವಸ ನಾವು ಭತ್ತಕ್ಕಾಗಿ ಹೆಚ್ಚಿಗೆ ಅವಲಂಬಿಸ ಬೇಕಾಗಿಲ್ಲ. ಹಿಪ್ಪನೇರಳೆ ಬೆಳೆಯುತಕ್ಕ ರೈತರಿಗೆ ನೀರು ಒದಗಿಸಿದರೂ ಕೂಡ ಸಂತೋಷಪಡುತ್ತಾರೆ.

ಶ್ರೀ ಜಿ. ಮಾದೇಗೌಡ.—ನೀರು ಯಥೇಚ್ಛವಾಗಿ ಹೋಗತಕ್ಕ ವಿಚಾರ ನಿಮ್ಮ ದಾಖಲೆಯಲ್ಲಿಯೇ ಇದೆ. ಇದರ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಡಿ. ದೇವರಾಜ ಅರಸ್.—ವಿಚಾರ ಮಾಡಿ ನೋಡೋಣ.

ಶ್ರೀ ಜಿ. ಮಾದೇಗೌಡ.—ಈ ಯೋಜನೆಯಿಂದ ಮುಳುಗಡೆಯಾಗತಕ್ಕ ಪ್ರದೇಶ ಎಷ್ಟು ? ಗ್ರಾಮಗಳು ಎಷ್ಟು?

ಶ್ರೀ ಡಿ. ದೇವರಾಜ ಅರಸ್.—ಮುಳುಗಡೆಯಾಗತಕ್ಕ ಪ್ರದೇಶ ಜಾಸ್ತಿ ಇಲ್ಲ.

ಶ್ರೀ ಎಂ. ವಿ. ರಾಜಶೇಖರನ್.—ಸ್ವಾಮಿ, ಅದು ನನ್ನ ಪಾರ್ಲಿಮೆಂಟರಿ ಕ್ಷೇತ್ರ ; ಬಹಳ ಕಡಿಮೆ ಖರ್ಚಿನಿಂದ ಈ ಯೋಜನೆಯಾಗುತ್ತದೆಂದು ಪರಿಣತರು ವರದಿ ಕೊಟ್ಟಿದ್ದಾರೆ ; ಕೆಲಸ ಪ್ರಾರಂಭ ಮಾಡುವುದಕ್ಕೆ ತೀರ್ಮಾನ ಮಾಡಿದ್ದೀರಿ ; ಇದರಿಂದ ೩ ತಾಲ್ಲೂಕುಗಳಿಗೆ ಅನುಕೂಲವಾಗುತ್ತದೆ ; ಈ ಯೋಜನೆಯನ್ನು ಆದಷ್ಟು ಬೇಗ ಮುಗಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ ?

SRI D. DEVARAJ URS —Sir, one thing I want to assure the hon'ble Members concerning the House. Everybody knows my temperment, I want to use maximum water wherever it is possible As you are aware this project was lying there for years together. But now I have decided to take up this project. A scheme has been prepared and I assure that wherever it is possible, whatever the quantum of water is available I am prepared to utilise.

2-00 P.M.

Increasing Bed Strength in Hospital at Sagar

350. SRI L. T. THIMMAPPA HEGDE (Sagar) —Will the Minister for Health and Family Welfare be pleased to state :—

(*a*) whether it has come to the notice of the Government that the Sagar Taluk which is the centre of Malnad area has become a place of origin for many new diseases and that in the hospital at Sagar there are more number of inpatients than the number of beds provided for :

(*b*) if so, the bed strength of that hospital at present and the average number of inpatients visiting the hospital per month ;

(*c*) whether an estimate has been made for the number of beds to be increased with reference to the conditions prevelant in that place ;

(*d*) if so, the action taken in this regard ?

SRI M. MALLAPPA (Minister for Health and Family Welfare)—.

(*a*) Yes.

(*b*) The bed strength of the hospital is 74. This includes 50 beds of general hospital and 24 beds covered under India Population Project. An average of 480 patients per month are admitted as in-patients.

(*c*) There is public demand for the increase of bed strength in all hospitals in the State.

(*d*) 24 beds have been sanctioned under the India Population Project during 1976 and are being utilised.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ .— ಸ್ವಾಮಿ, ನಮ್ಮ ಮಲೆನಾಡು ಭಾಗ ಅರಣ್ಯ ಖಾಯಿಲೆ ಇರುವ ಪ್ರದೇಶವಾದ್ದರಿಂದ ಅಲ್ಲಿಯ ಪರಿಸ್ಥಿತಿಗನುಗುಣವಾಗಿ ಆಸ್ಪತ್ರೆಗಳಲ್ಲಿ ಹಾಸಿಗೆಗಳನ್ನು ಹೆಚ್ಚಿಸುವುದು ಅಗತ್ಯವಿದೆ ಎಂದು ಕೇಳಿದ್ದರ ಬಗ್ಗೆ ಅದು ನನ್ನ ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ಅಲ್ಲದೆ ತಾವು ಆ ಸ್ಥಳವನ್ನು ಕೂಡ ನೋಡಿದ್ದೀರಿ. ಅಲ್ಲಿ ಜನಗಳು ಎಷ್ಟು ಕಷ್ಟದಲ್ಲಿದ್ದಾರೆ ಅನ್ನುವುದೂ ಕೂಡ ತಮಗೆ ಗೊತ್ತಿದೆ. ಆದರೂ ಕೂಡ ತಮ್ಮ ಪೂರನೇ ಉತ್ತರದಲ್ಲಿ ರಾಜ್ಯದಲ್ಲಿರುವ ಎಲ್ಲಾ ಆಸ್ಪತ್ರೆಗಳಲ್ಲಿಯೂ ಹಾಸಿಗೆಗಳನ್ನು ಹೆಚ್ಚಿಸಲು ಸಾರ್ವಜನಿಕರಿಂದ ಬೇಡಿಕೆಗಳು ಬಂದಿವೆ ಎಂದು ಹೇಳಿದ್ದೀರಿ. ಈಗ ಒಟ್ಟಿನಲ್ಲಿ ನಮ್ಮಲ್ಲಿ ಏನು ಮಾಡುತ್ತೀರಾ ಅನ್ನುವಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ತಿಳಿಸಬೇಕೆಂದು ಕೇಳಿ ಕೊಳ್ಳುತ್ತೇನೆ.

† ಶ್ರೀ ಎಂ. ಮಲ್ಲಪ್ಪ.— ಮಾನ್ಯ ಸದಸ್ಯರಿಗೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಅದರ ಪ್ರಕಾರ ಒಟ್ಟು ೮೮ ಹಾಸಿಗೆಗಳು ಇದೆ ಕ್ಯಾಸಿನೂರ ಫಾರೆಸ್ಟ್ ಡಿಸೀಸ್ ತಡೆಗಟ್ಟಲಿಕ್ಕೆ ಇನ್ನೂ ೧೪ ಒಳ ಹಾಸಿಗೆಗಳನ್ನು ಹಾಕಲಿಕ್ಕೆ ಕಟ್ಟಡ ಕಟ್ಟುತ್ತೇವೆ. ಭಾರತ ಜನಸಂಖ್ಯೆ ರೀತ್ಯ ೨೪ ಹಾಸಿಗೆ ಕೊಟ್ಟಿದೆ. ಸಾರ್ವಜನಿಕ ಆಸ್ಪತ್ರೆಯಲ್ಲಿ ೫೦ ಹಾಸಿಗೆಗಳು. ಸಾಮಾನ್ಯವಾಗಿ ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ೩೦ ರಿಂದ ೫೦ ಜನಗಳಿಗೆ ಪರಿವರ್ತನೆ ಮಾಡಬೇಕಾದ್ದು ಸರ್ಕಾರದ ಯೋಜನೆ. ಈಗ ಸಾಗರಕ್ಕೆ ೫೦, ೨೪, ೧೪ ಒಟ್ಟು ೮೮ ಹಾಸಿಗೆಗಳ ಯೋಜನೆ ಇರುತ್ತದೆ. ರಾಜ್ಯದಲ್ಲಿ ಎಲ್ಲಾ ಆಸ್ಪತ್ರೆಗಳಲ್ಲಿಯೂ ಹಾಸಿಗೆಗಳನ್ನು ಹೆಚ್ಚಿಸಲು ಸಾರ್ವಜನಿಕರಿಂದ ಬೇಡಿಕೆಗಳಿವೆ ಎಂದು ಹೇಳಿದ್ದೇನೆಯೇ ಹೊರತು ತಮ್ಮ ಸ್ಥಳದ ಅವಶ್ಯಕತೆಯನ್ನು ಉತ್ಪ್ರೇಕ್ಷೆ ಮಾಡಬೇಕೆಂದು ಸರ್ಕಾರದ ಉದ್ದೇಶವಲ್ಲ ಎಂದು ಹೇಳಬಯಸುತ್ತೇನೆ.

ಶ್ರಿ ಎಲ್.ಟಿ. ತಿಮ್ಮಪ್ಪ ಹೆಗ್ಗಡೆ. — ಸ್ವಾಮಿ, ೨೪ ಹಾಸಿಗೆಗಳನ್ನು ಇಂಡಿಯನ್ ಪಾಪ್ಯುಲೇಷನ್ ಪ್ರಾಜೆಕ್ಟ್ ಪ್ರಕಾರ ೧೯೭೬ನೇ ಇಸವಿಯಲ್ಲಿ ಮಾಡಿದ್ದು. ಈಗ ನಾನು ಕೇಳುತ್ತಾ ಇರುವುದು ನಮ್ಮ ಪ್ರದೇಶದ ಅವಶ್ಯಕತೆಗನುಗುಣವಾಗಿ ಹಾಸಿಗೆಗಳ ಸೌಕರ್ಯವನ್ನು ಹೆಚ್ಚು ಮಾಡಿಕೊಡಬೇಕೆಂದು. ಏಕೆಂದರೆ ತಾವು ಅಲ್ಲಿಯ ಆವಶ್ಯಕತೆಯನ್ನು ಖುದ್ದು ನೋಡಿ ಗಮನಿಸಿದ್ದೀರಿ. ಆದುದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ನಿರ್ದಿಷ್ಟವಾದಂತಹ ಭರವಸೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಪ್ಪ.— ಮಾನ್ಯ ಸದಸ್ಯರು ಕೇಳತಕ್ಕ ಬಗ್ಗೆ ನನಗೆ ಸಹಾನುಭೂತಿ ಇದೆ. ಕೆ.ಎಫ್.ಡಿ. ವಾರ್ಡ್ ನಿರ್ಮಾಣ ಮಾಡೋಣ. ಅಲ್ಲಿಗೆ ಏನೇನು ಅನುಕೂಲ ಬೇಕೋ ಅದನ್ನು ಮಾಡೋಣ. ಇನ್ನೂ ಎಷ್ಟು ಅವಶ್ಯಕತೆ ಬೇಕೋ ಅದರ ಬಗ್ಗೆ ಹಣಕಾಸಿನ ಪರಿಸ್ಥಿತಿಯನ್ನು ಕಂಡು ಕೊಂಡು ಅನುಕೂಲ ಒದಗಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು ಮಾನ್ಯ ಸದಸ್ಯರಾದ ಶ್ರೀ ಶಂಕರರಾವ್ ಅವರು ಪ್ರಶ್ನೆ ನಂ ೩೬೮ ಕೇಳಬಹುದು